ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2 ನೇ ಪ್ರತಿವಾದಿ ವಾರಸುದಾರರ ಪರ ವಕೀಲರಿಂದಃ-

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯವನ್ನು ತಿಳಿದುಕೊಂಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿಯನ್ನು ನಮ್ಮ ಯಜಮಾನರು ಹರಾಜಿನಲ್ಲಿ 1993 ರಲ್ಲಿ ಖರೀದಿಸಿರುತ್ತಾರೆ. ನಾವು ಮೂಲತಃ ರಾಮನಗರದಲ್ಲಿ ವಾಸವಿರುತ್ತೇವೆ. ನಮ್ಮ ಯಜಮಾನರು ಸಹ ರಾಮನಗರದಲ್ಲಿ ಹುಟ್ಟಿ ಬೆಳೆದಿರುತ್ತಾರೆ. ದಾವಾ ಆಸ್ತಿಯ ಅಳತೆ ಪೂರ್ವ ಪಶ್ಚಿಮ 25 ಅಡಿ ಮತ್ತು ಉತ್ತರ ದಕ್ಷಿಣ 30 ಅಡಿ ಇರುತ್ತದೆ. ದಾವಾ ಆಸ್ತಿಯ ಚಕ್‌ಬಂದಿ ಪೂರ್ವಕ್ಕೆ ಸೈಟ್ ನಂಬರ್ 73, ಪಶ್ಚಿಮಕ್ಕೆ ಖಾಸಗಿ ಸ್ವತ್ತು, ಉತ್ತರಕ್ಕೆ ಸೈಟು 23 ಇರುತ್ತದೆ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ಹರಾಜಿನಲ್ಲಿ ದಾವಾ ಆಸ್ತಿಯು 17 ವರೆ ಸಾವಿರಕ್ಕೆ ಹರಾಜಾಗಿರುತ್ತದೆ. ನಾನು ಹೇಳವಂತೆ ಯಾವುದೇ ಹರಾಜಿನಲ್ಲಿ ದಾವಾ ಆಸ್ತಿಯನ್ನು ಖರೀದಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಬೇಲಿ ಇರುವುದಿಲ್ಲ.

ಸಾಕ್ಷಿ ದಾವಾ ಆಸ್ತಿಗೆ ಸಂಬಂಧಿಸಿದಂತೆ 2020 ರ ಪೂರ್ವದಲ್ಲಿ ನಗರಸಭೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು 2020 ರ ಕಂದಾಯ ಕಟ್ಟಲು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂದಿಸಿದಂತೆ ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ 2 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು 1ನೇ ಪ್ರತಿವಾದಿಗೆ ಆಶ್ರಯೋಜನೆಯಡಿ ಸರ್ಕಾರದಿಂದ ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿರವರಿಗೆ ವಡೇರ ಹಳ್ಳಿ ಗ್ರಾಮದ ಖಾತಾ ನಂಬರ್ 75 ಸೈಟು 232 ವಿಸ್ತೀರ್ಣ ಪೂರ್ವ ಪಶ್ಚಿಮ 30 ಅಡಿ, ಉತ್ತರ ದಕ್ಷಿಣ 25 ಅಡಿ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮುಂದುವರೆ ಸದರಿ ಸೈಟಿನ ಪೂರ್ವಕ್ಕೆ ಸೈಟ್ ನಂಬರ್ 233, ಪಶ್ಚಿಮಕ್ಕೆ ಹಳ್ಳ, ಉತ್ತರಕ್ಕೆ ಸೈಟ್ ನಂಬರ್ 231 ಮತ್ತು ದಕ್ಷಿಣಕ್ಕೆ ರಸ್ತೆ ಎಂದು ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿರವರರಿಗೆ ಸರ್ಕಾರದಿಂದ ಮಂಜೂರಾದ ಸೈಟ್ ಅನ್ನು 2ನೇ ಪ್ರತಿವಾದಿಯು ದಿನಾಂಕ 01.04.2013 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2013 ರಲ್ಲಿ 2ನೇ ಪ್ರತಿವಾದಿರವರು ಖರೀದಿಸಿದಾಗಿನಿಂದ ಇಲ್ಲಿಯವರೆಗೂ ಅವರ ಸ್ವಾಧೀನದಲ್ಲಿ ಇದ್ದು ಅನುಭವಿಸಿಕೊಂಡು ಬರುತ್ತಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2020 ರಲ್ಲಿ ನಮಗೆ ತಿಳಿದುಬಂದ ನಂತರ ಪ್ರತಿವಾದಿರವರ ವಿರುದ್ಧ ರಾಮನಗರ ನಗರಸಭೆಯಲ್ಲಿ ತಕರಾರನ್ನು ಸಲ್ಲಿಸಿರುತ್ತೀರಾ ಎಂದರೆ ಹೌದು. ಆ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿಯ ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇದ್ದರೂ ಸಹ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.